**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**

**ಅರಕಲಗೂಡು**

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ25/07/2025**

**ಅಸಲು ದಾವೆ. ನಂ.** *195/2017*

ಡಿ.ಡಬ್ಲ್ಯೂ-*1*

(ಪಾಟೀ ಸವಾಲು ಶ್ರೀ ಕೆ.ಕೆ ವಕೀಲರಿಂದ ವಾದಿಯ ಪರವಾಗಿ )

ನನ್ನ ಹೆಸರು ತುಳಸಿ. ಗಂಡನ ಹೆಸರು ಮಹದೇವ ಶೆಟ್ಟಿ. ದಾವಾ ಆಸ್ತಿಯನ್ನು ನಾನು ಮೈಲಾರ ಶೆಟ್ಟಿ ಮತ್ತು ಕುಮಾರ ಸ್ವಾಮಿಯಿಂದ ಕ್ರಯಕ್ಕೆ ಪಡೆದಿರುತ್ತೇನೆ. ಮೈಲಾರ ಶೆಟ್ಟಿಗೆ ದಾವಾ ಆಸ್ತಿಯು ಅವರದ್ದೆ. ದಾವಾ ಆಸ್ತಿಯ ಸರ್ವೆ ನಂ.ನನಗೆ ಗೊತ್ತಿರುವುದಿಲ್ಲ. ಆದರೆ ಆಸ್ತಿಯ ಚಕ್ಕು ಬಂದಿಯನ್ನು ಹೇಳುತ್ತೇನೆ. ಪೂರ್ವಕ್ಕೆ ಕಾಳನಾಯಕ ಗೌರಮ್ಮರವರ ನಿವೇಶನ, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ಪಂಚಾಯಿತಿ ರಸ್ತೆ, ದಕ್ಷಿಣಕ್ಕೆ ಮಂಜರವರ ಮನೆ ಇರುತ್ತದೆ. 2011 ವರ್ಷದಲ್ಲಿ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತೇನೆ. ದಾವಾ ಆಸ್ತಿಯು ದಿಃ 08.07.2011 ರಲ್ಲಿ ಕ್ರಯ ಪತ್ರವು ನೊಂದಣಿ ಆಗಿರುತ್ತದೆ. ನಮ್ಮ ಮನೆಯ ನಂಬರ್ ನನಗೆ ನೆನಪಿರುವುದಿಲ್ಲ. ಮನೆಗೆ ಸಂಬಂಧಿಸಿದ ಡಿಮ್ಯಾಂಡ್ ರಿಜಿಸ್ಟರ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮನೆ ಕಟ್ಟಲು ನನಗೆ ಪರವಾನಿಗೆಯನ್ನು ನೀಡಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕ್ರಯ ಪತ್ರವನ್ನು ನೊಂದಣಿ ಮಾಡುವ ಸಮಯದಲ್ಲಿ ಜವರೇಗೌಡರ ಮಗ ಮಂಜೇಗೌಡ ಮತ್ತು ಬಸವೇಗೌಡರ ಮಗ ಪರಶುರಾಮಗೌಡ ಹಾಜರಿದ್ದರು. ದಾವಾ ಸ್ವತ್ತು ಮೈಲಾರಶೆಟ್ಟಿಗೆ ಹೇಗೆ ಬಂತು ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾವು ಕಂದಾಯವನ್ನು ಪಾವತಿಸುತ್ತಿದ್ದೇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಮ್ಮ ಮನೆಯ ನಿವೇಶನದ ಖಾತೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಮನೆಯ ನಿವೇಶನದ ಸುತ್ತಳತೆ 30 x 40 ಅಡಿ ಇರುತ್ತದೆ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.

O.S. 195/2017

DW- 1